ವಿಶ್ವ ತೆಂಗು ದಿನ

# ನೀರಾ ಉತ್ಪಾದನೆಗೆ ಹೊಸ ಮಸೂದೆ ಮಂಡನೆ

## ■ ನೀರಾ ಮಾರಾಟಕ್ಕೆ ಅಬಕಾರಿ ಕಾನೂನು ತಿದ್ದುಪಡಿ ■ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ: ಜಯಚಂದ್ರ

ತುಮಕೂರು: ನೀರಾ (ಕಲ್ಪರಸ) ಒಂದು ಆರೋಗ್ಯಕರ ಪೇಯ. ಈ ಹಿನ್ನೆಲೆಯಲ್ಲಿ ಕೇರಳದ ಕಾಸರಗೋಡಿನಲ್ಲಿ ಯಾವ ರೀತಿ ನೀರಾವನ್ನು ಸಂಸ್ಕರಿಸಲಾಗುತ್ತದೆ ಎಂಬುದನ್ನು ಸ್ವತಃ ವೀಕ್ಷಿಸಿ, ಮುಖ್ಯಮಂತ್ರಿಗಳ ಜೊತೆ ಚರ್ಚಿಸಿ ಈಗಿರುವ ಅಬಕಾರಿ ಕಾನೂನಿಗೆ ತಿದ್ದುಪಡಿ ತಂದು ಹೊಸ ಮಸೂದೆಯನ್ನು ಮುಂದಿನ ಅಧಿವೇಶನದಲ್ಲಿ ಮಂಡಿಸಲು ಪ್ರಯತ್ನಿಸಲಾಗುವುದು ಎಂದು ಕಾನೂನು ಸಚಿವ ಟಿ.ಬಿ.ಜಯಚಂದ್ರ ಭರವಸೆ ನೀಡಿದರು.

ನಗರದ ತುಮಕೂರು ವಿಶ್ವವಿದ್ಯಾಲಯದ ಸರ್ ಎಂ. ವಿಶ್ವೇಶ್ವರಯ್ಯ ಸಭಾಂಗಣದಲ್ಲಿ ತುಮಕೂರು ವಿವಿ ಪ್ರಸಾರಾಂಗ ವಿಭಾಗ, ಕೇರಳದ ಸಿಪಿಸಿಆರ್‌ಐ ಸಹಯೋಗದಲ್ಲಿ ವಿಶ್ವತೆಂಗು ದಿನಾಚರಣೆ ಅಂಗವಾಗಿ ಬುಧವಾರ ಹಮ್ಮಿಕೊಂಡಿದ್ದ 'ಕಲ್ಪರಸ ಕರ್ನಾಟಕದಲ್ಲಿ ಸಿಹಿ ನೀರಾ ನೀತಿ' ಕುರಿತ ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣವನ್ನು ನೀರಾ ಸೇವಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ನೀರಾ ಎಂದರೆ ಹೆಂಡ ಎಂಬ ತಪ್ಪುಕಲ್ಪನೆ ಜನರಲ್ಲಿದೆ. ಆದ್ದರಿಂದ ಕಲ್ಪರಸ ಎನ್ನುವ ಹೆಸರು ಸರಿಯಿದೆ. ಇದೊಂದು ನೈಸರ್ಗಿಕ ಸಂಪತ್ತು. ಇದರ ಸದ್ಬಳಕೆ ಮಾಡಿಕೊಳ್ಳುವ ನಿಟ್ಟಿನಲ್ಲಿ ಸೆ.13 ರಂದು ಮಂಗಳೂರಿಗೆ ಭೇಟಿ ನೀಡುತ್ತಿದ್ದು ಈ ವೇಳೆ ಕಾಸರಗೋಡಿಗೂ ಭೇಟಿ ನೀಡಿ ನೀರಾದ ವಿವಿಧ ಹಂತಗಳ ಸಂಸ್ಕರಣೆಯನ್ನು ವೀಕ್ಷಿಸಿ ನಂತರ ಮುಖ್ಯಮಂತ್ರಿಗಳ ಜೊತೆ ಚರ್ಚೆ



ತುಮಕೂರು ವಿಶ್ವವಿದ್ಯಾಲಯದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಕಲ್ಪರಸ ಕರ್ನಾಟಕದಲ್ಲಿ ಸಿಹಿ ನೀರಾ ನೀತಿ ಕುರಿತ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಸಚಿವ ಟಿ.ಬಿ. ಜಯಚಂದ್ರ ನೀರಾ ಸೇವಿಸುವ ಮೂಲಕ ಉದ್ಘಾಟಿಸಿದರು.

ನಡೆಸಿ ಕಾನೂನು ಸಡಿಲಗೊಳಿಸಿ ನೀರಾ ಉತ್ಪಾದನೆಗೆ ಅವಕಾಶ ಕಲ್ಪಿಸಲಾಗುವುದು ಎಂದು ಭರವಸೆ ನೀಡಿದರು.

ನಮ್ಮ ನಾಡಿನಲ್ಲಿ ನೈಸರ್ಗಿಕ ಸಂಪತ್ತು ಹೇರಳವಾಗಿದೆ. ಆದರೆ ಅವುಗಳ ಸಮರ್ಪಕ ಬಳಕೆ ಮಾಡಿಕೊಳ್ಳುವಲ್ಲಿ ವಿಫಲವಾಗಿದ್ದೇವೆ. ಆದರೆ ವಿದೇಶಗಳಲ್ಲಿ ದೊರೆಯುವ ನೈಸರ್ಗಿಕ ಸಂಪತ್ತನ್ನು ಸಮರ್ಪಕವಾಗಿ ಬಳಕೆ ಮಾಡಲಾಗುತ್ತಿದೆ. ಗ್ರೀನ್ ಟೀ ನಂತಹ ಉತ್ಪನ್ನಗಳು ಸಾಕ್ಷಿಯಾಗಿವೆ. ನನಗೆ 18 ವರ್ಷಗಳಿಂದ ನೀರಾ ಬಗ್ಗೆ ತಿಳಿವಳಿಕೆಯಿದೆ. ನೀರಾ ಪರವಾಗಿಯೇ ಇದ್ದೇನೆ. ಹಾಗಾಗಿ ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಈ ವಿಚಾರವನ್ನು ಮುಂದಿಟ್ಟು ತಿದ್ದುಪಡಿ ತರಲಾಗುವುದು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ವಿಶ್ವನಾಥ ಎಣ್ಣೆಕಟ್ಟೆ ಬರೆದಿರುವ ನೀರಾನಿಧಿ ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದ ಮಾಜಿ ಸ್ಪೀಕರ್ ಕೃಷ್ಣ ರಾಜ್ಯದಲ್ಲಿ ಭೀಕರ ಬರಗಾಲವಿದ್ದು, 350ಕ್ಕೂ ಹೆಚ್ಚು ರೈತರು ಸಾವನಪ್ಪಿದ್ದಾರೆ. ಇಷ್ಟಾದರೂ ನೀರಾಗೆ ಅನುಮತಿ ನೀಡಲು ವಿಳಂಬ ಮಾಡುತ್ತಿರುವುದು ಸರಿಯಲ್ಲ. ಕೂಡಲೇ ಈ ಬಗ್ಗೆ ಸ್ಪಷ್ಟ ನಿರ್ಧಾರ ಪ್ರಕಟಿಸಬೇಕು. ಬಂಡವಾಳಗಾರರ ಲಾಬಿಗೆ ಒಳಗಾಗದೆ ರೈತರ ಪರ ನಿಲ್ಲಬೇಕೆಂದು ಒತ್ತಾಯಿಸಿದರು.

ನೀರಾ ಇಳಿಸುವುದರಿಂದ ರಾಜ್ಯದ ಬೊಕ್ಕಸಕ್ಕೆ ವಾರ್ಷಿಕ 25 ಸಾವಿರ ಕೋಟಿ ರೂ. ಆದಾಯ ಬರಲಿದೆ. ಅಲ್ಲದೆ 50 ಸಾವಿರಕ್ಕೂ ಹೆಚ್ಚು ಜನರಿಗೆ ಉದ್ಯೋಗ ದೊರಕಿಸಬಹುದು. ಅಲ್ಲದೆ ಕಬ್ಬಿನ ಬೆಂಬಲ ಬೆಲೆಗೆ ನೀಡಲು ಸರ್ಕಾರ ಸಾಕಷ್ಟು ತಿಣುಕಾಡುತ್ತಿದ್ದು, ಈಥನಾಲ್ ಉತ್ಪಾದನೆಗೆ ಅವಕಾಶ ನೀಡಿದರೆ ಸರಕಾರ ನಿಗದಿ ಮಾಡಿದ್ದಕಿಂತಲೂ ಹೆಚ್ಚಿನ ಬೆಲೆಯನ್ನು ಪ್ರತಿ ಟನ್‌ಗೆ ನೀಡಬಹುದಾಗಿದೆ. ಈ ನಿಟ್ಟಿನಲ್ಲಿ ಸರ್ಕಾರ ಚಿಂತನೆ ನಡೆಸಬೇಕಾಗಿದೆ ಎಂದರು.

ಸರ್ಕಾರಿ ಪರಿಶಿಷ್ಟ ಜಾತಿ, ವರ್ಗ, ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತ ರೈತರ ಹೊಲಗಳಿಗೆ ನೀರು ಒದಗಿಸಲು ಕೈಗೊಂಡಿರುವ ಗಂಗಾ ಕಲ್ಯಾಣ ಯೋಜನೆಯನ್ನು ಎಲ್ಲಾ ವರ್ಗದ ಸಣ್ಣ ಹಿಡುವಳಿದಾರರಿಗೂ ವಿಸ್ತರಿಸಬೇಕು. ಕೊಳವೆ ಬಾವಿಯ ಜೊತೆಗೆ ಒಂದು ಕೃಷಿ ಹೊಂಡವನ್ನು ಕಡ್ಡಾಯಗೊಳಿಸಿ ಅಂತರಜಲ ಮರು ಪೂರಣಕ್ಕೆ ಕಟ್ಟುನಿಟ್ಟಿನ ಆದೇಶ ಜಾರಿ ಮಾಡಬೇಕೆಂದು ಆಗ್ರಹಿಸಿದರು.

ತುಮಕೂರು ವಿವಿ ಕುಲಪತಿ ಪ್ರೊ.ಎ.ಎಚ್. ರಾಜಾಸಾಬ್, ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷ ರಂಗಸ್ವಾಮಯ್ಯ, ಭೂಮಿ ಸುಸ್ಥಿರ ಅಭಿವೃದ್ಧಿ ಸಂಸ್ಥೆಯ ಅಣೆಕಟ್ಟೆ ವಿಶ್ವನಾಥ್, ತುಮಕೂರು ವಿವಿ ಪ್ರಸಾರಾಂಗದ ಡಾ.ನಿತ್ಯಾನಂದ ಬಿ.ಶೆಟ್ಟಿ, ಹಿರಿಯ ವಿಜ್ಞಾನಿ ಡಾ.ಬಾಲಚಂದ್ರ ಹೆಬ್ಬಾರ್, ತೆಂಗು ಬೆಳೆಗಾರರಾದ ಜಯಪ್ರಸಾದ್, ಸೋಮಶೇಖರರೆಡ್ಡಿ ಉಪಸ್ಥಿತರಿದ್ದರು. ಕಾರ್ಯಕ್ರಮಕ್ಕೆ ಆಗಮಿಸಿದ್ದ ಎಲ್ಲರಿಗೂ ಸಿಹಿ ನೀರಾ ವಿತರಿಸಲಾಯಿತು.

ಇದೇ ಸಂದರ್ಭದಲ್ಲಿ ಭೂತಾಯಿ ಬಳಗದ ನಿರ್ಮಲ ಮತ್ತು ಸಂಗಡಿಗರಿಂದ ಜನಜಾಗೃತಿ ಗೀತೆಗಳು, ನೆಲಜಲದ ಹಾಡುಗಳು ಗಮನ ಸೆಳೆದವು. ತೆಂಗಿನಿಂದ ಉತ್ಪತ್ತಿ ಮಾಡುವ ಕಲ್ಪರಸ ಮತ್ತು ಇತರೆ ಉತ್ಪನ್ನಗಳ ಪ್ರದರ್ಶನ ಹಾಗೂ ಮಾರಾಟ ಏರ್ಪಡಿಸಲಾಗಿತ್ತು.

### ಲಾಬಿಗೆ ಮಣಿಯದೆ ನೀರಾ ನೀತಿ ಜಾರಿಗೊಳಿಸಿ

ಕಳೆದ ಒಂದು ವರ್ಷದಿಂದ ಕೇರಳ ಸರಕಾರ ನೀರಾ ಇಳಿಸಲು ಅವಕಾಶ ನೀಡಿದ್ದು, ಯಾವುದೇ ರೀತಿಯ ಸಮಸ್ಯೆ ಉಂಟಾಗದಂತೆ ನೀರಾ ಇಳಿಸಿ ಸಂಸ್ಕರಿಸಿ ಮಾರುಕಟ್ಟೆಗೆ ಬಿಡುಗಡೆ ಮಾಡಲಾಗಿದೆ. ಕರ್ನಾಟಕದಲ್ಲಿಯೂ ನೀರಾಗೆ ಅನುಮತಿ ನೀಡುವುದರಿಂದ ರೈತರು ಆರ್ಥಿಕ ಅಭಿವೃದ್ಧಿ ಹೊಂದಲು ಸಾಧ್ಯವಿದೆ. ಆದ್ದರಿಂದ ಸರ್ಕಾರ ಈ ನಿಟ್ಟಿನಲ್ಲಿ ಲಾಬಿಗಳಿಗೆ ಮಣಿಯದೆ ನೀರಾ ನೀತಿಯನ್ನು ಜಾರಿಗೆ ತರಬೇಕು ಎಂದು ಕೇರಳದ ಸಿಪಿಸಿಆರ್‌ಐ ನಿರ್ದೇಶಕ ಡಾ.ಚೌಡಪ್ಪ ಆಗ್ರಹಿಸಿದರು.

ತೆಂಗು ಬೆಳೆಗಾರರು ತೆಂಗನ್ನು ಒಂದು ಆರೋಗ್ಯಯುಕ್ತ ಆಹಾರವನ್ನಾಗಿ ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ಪ್ರಯತ್ನಿಸಿದ್ದು, ತೆಂಗಿನಿಂದ ಕುಟುಂಬದ ಆರೋಗ್ಯ ಮತ್ತು ಆಹಾರ ಭದ್ರತೆ ಎಂಬ ಘೋಷ ವಾಕ್ಯದೊಂದಿಗೆ ವಿಶ್ವ ತೆಂಗು ದಿನವನ್ನು ಆಚರಿಸಲಾಗುತ್ತಿದೆ. ಕಲ್ಪ ರಸದಲ್ಲಿ ಮನುಷ್ಯನ ದೇಹಕ್ಕೆ ಅಗತ್ಯವಿರುವ ಪೊಟಾಷಿಯಂ, ಸೋಡಿಯಂ, ಸಕ್ಕರೆ ಅಂಶಗಳಿರುವುದರಿಂದ ಇದರ ಸೇವನೆಯಿಂದ ಹೃದಯ ಸಂಬಂಧಿ ಹಾಗೂ ಕ್ಯಾನ್ಸರ್‌ನಂತಹ ಕಾಯಿಲೆಗಳನ್ನು ತಡೆಗಟ್ಟಬಹುದಾಗಿದೆ ಎಂದು ಸಲಹೆ ನೀಡಿದರು.